ಇ) ದಾಂಡೇಲಿಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಆಸ್ಪತ್ರೆಗೆ ಮಂಜೂರಾದ 14 ವೈದ್ಯರ ಹುದ್ದೆಗಳ ಪೈಕಿ 9 ಹುದ್ದೆಗಳು ಮತ್ತು 50 ಸಿಬ್ಬಂದಿ ವರ್ಗದ ಹುದ್ದೆಗಳ ಪೈಕಿ 21 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಹಾಗಿದ್ದಲ್ಲಿ, ವೈದ್ಯರ ಹಾಗೂ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು)

ವೈದ್ಯರ ಕೊರತೆ ನಿವಾರಿಸಲು ವೈದ್ಯಕೀಯ ವಿಭಾಗ, ಸ್ತ್ರೀ ಮತ್ತು ಪ್ರಸೂತಿ ವಿಭಾಗ, ಅರವಳಿಕೆ ವಿಭಾಗ ಮತ್ತು ದಂತ ಚಿಕಿತ್ಸೆ ವಿಭಾಗಗಳಲ್ಲಿ ಅಂಶಕಾಲಿಕ ತಜ್ಞ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಕರ್ನಾಟಕ ಲೋಕ ಸೇವಾ ಆಯೋಗವು ಇಲಾಖೆಯಲ್ಲಿ ಖಾಲಿ ಇರುವ 76 ಫಾರ್ಮಾಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಪಟ್ಟಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿದ್ದು, ಕಾರಾವಿ ಆಸ್ಪತ್ರೆ, ದಾಂಡೇಲಿಯಲ್ಲಿ ಖಾಲಿ ಇರುವ ಫಾರ್ಮಾಸಿಸ್ಟ್ ಹುದ್ದೆಯನ್ನು ಶೀಘ್ರವಾಗಿ ಭರ್ತಿ ಮಾಡಲಾಗುವುದು.

ಸಂಖ್ಯೆ: ಕಾಇ 86 ಎಲ್‌ಎಸ್‌ಐ 2009

(ಬಿ.ಎನ್.ಬಚ್ಚೇಗೌಡ)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

270 ಶ್ರೀ. ಗೋಪಾಲ ಭಂಡಾರಿ ಹೆಚ್ (ಕಾರ್ಕಳ)
ಶ್ರೀ.ಡಿ.ಸುಧಾಕರ, ಮಾನ್ಯ ಸಮಾಜ ಕಲ್ಯಾಣ ಸಚಿವರು.

ಅ) ಉಡುಪಿ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು; ಅವುಗಳು ಎಲ್ಲೆಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಉಡುಪಿ ಜಿಲ್ಲೆಯಲ್ಲಿ 21 ಮೆಟ್ರಿಕ್–ಪೂರ್ವ ಮತ್ತು 11 ಮೆಟ್ರಿಕ್–ನಂತರದ ಹೀಗೆ ಒಟ್ಟು 32 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರ ಕೆಳಕಂಡಂತಿವೆ.

ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು

	ವಿವರ	ಬಾಲಕ/ ಬಾಲಕಿ	ವಿದ್ಯಾರ್ಥಿಗಳ ಸಂಖ್ಯೆ	ಸ್ವಂತ/ಬಾಡಿಗೆ
	ಉಡುಪಿ ತಾ:			

1	ಶಿರ್ವಾ	ಬಾಲಕ	50	ಸ್ವಂತ
2	ಬನ್ನಂಜೆ	ಬಾಲಕ	50	ಸ್ವಂತ
3	ಪರ್ಡೂರು	ಬಾಲಕ	50	ಸ್ವಂತ
4	ಬೆಳ್ಳಂಪಳ್ಳಿ	ಬಾಲಕ	50	ಸ್ವಂತ
5	ಬ್ರಹ್ಮಾವರ	ಬಾಲಕಿ	50	ಸ್ವಂತ
6	ಗೋಳಿ ಅಂಗಡಿ	ಬಾಲಕ	50	ಬಾಡಿಗೆ
7	ಪಟ್ಲ	ಬಾಲಕಿ	60	ಸ್ವಂತ
8	ಕುಡಿಬೆಟ್ಟು ಕುಡಿಗ್ರಾಮ	ಬಾಲಕ	50	ಬಾಡಿಗೆ
	ಕುಂದಾಪುರ ತಾ:			
9	ಕುಂದಾಪುರ	ಬಾಲಕ	50	ಸ್ವಂತ
10	ಕುಂದಾಪುರ	ಬಾಲಕಿ	50	ಬಾಡಿಗೆ
11	ಬೈಂದೂರು	ಬಾಲಕ	50	ಸ್ವಂತ
12	ಕೇದೂರು	ಬಾಲಕ	50	ಸ್ವಂತ
13	ದಾವುಂದ	ಬಾಲಕ	50	ಸ್ವಂತ
14	ಬಸರೂರು	ಬಾಲಕ	50	ಸ್ವಂತ
15	ಕೇದೂರು	ಬಾಲಕಿ	60	ಸ್ವಂತ
16	ಅಮಾಸಬೈಲು	ಬಾಲಕಿ	50	ಬಾಡಿಗೆ
	ಕಾರ್ಕಳ ತಾ:			
17	ಕಾರ್ಕಳ	ಬಾಲಕ	50	ಸ್ವಂತ
18	ಬೈಲೂರು	ಬಾಲಕ	50	ಸ್ವಂತ
19	ಪಳ್ಳಿ	ಬಾಲಕ	50	ಸ್ವಂತ
20	ಮುನಿಯಾಲು	ಬಾಲಕ	50	ಬಾಡಿಗೆ
21	ಕಾರ್ಕಳ	ಬಾಲಕಿ	60	ಸ್ವಂತ
	ಒಟ್ಟು		**1080**	

ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು

	ಉಡುಪಿ ತಾ:			
1	ಉಡುಪಿ ಟೌನ್ (ಬನ್ನಂಜೆ)	ಬಾಲಕ	60	ಬಾಡಿಗೆ
2	ಉಡುಪಿ ಟೌನ್ (ವೃತ್ತಿಪರ)	ಬಾಲಕಿ	100	ಬಾಡಿಗೆ
3	ಉಡುಪಿ (ಕುಂಜಿಬೆಟ್ಟು)	ಬಾಲಕಿ	110	ಸ್ವಂತ
4	ಓರಿಯಾಡ್ಯ	ಬಾಲಕ	50	ಸ್ವಂತ
5	ಕಾಮ	ಬಾಲಕ	50	ಸ್ವಂತ
	ಕಾರ್ಕಳ ತಾ:			

6	ಹಬ್ರಿ	ಬಾಲಕ	60	ಸ್ವಂತ
7	ಕಾರ್ಕಳ	ಬಾಲಕ	85	ಸ್ವಂತ
8	ಕಾರ್ಕಳ	ಬಾಲಕಿ	100	ಸ್ವಂತ
	ಕುಂದಾಪುರ ತಾ:			
9	ಕುಂದಾಪುರ ಟೌನ್	ಬಾಲಕ	75	ಸ್ವಂತ
10	ಕುಂದಾಪುರ	ಬಾಲಕಿ	75	ಬಾಡಿಗೆ
11	ಶಂಕರ ನಾರಾಯಣ	ಬಾಲಕಿ	75	ಬಾಡಿಗೆ
	ಒಟ್ಟು		**840**	

ಆ) ಉಡುಪಿ ಜಿಲ್ಲೆಯಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

21 ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 1080 ಮತ್ತು 11 ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳಲ್ಲಿ 840 ಹೀಗೆ ಒಟ್ಟು 1920 ವಿದ್ಯಾರ್ಥಿಗಳ ಸಂಖ್ಯೆ ಇರುತ್ತದೆ. 2008–09ನೇ ಸಾಲಿನಲ್ಲಿ ಮಂಜೂರಾಗಿರುವ ಒಂದು ಮೆಟ್ರಿಕ್–ನಂತರದ ಹಾಗೂ ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳಿಗೆ ಹುದ್ದೆಗಳು ಮಂಜೂರಾತಿ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಇವುಗಳನ್ನು ಹೊರತುಪಡಿಸಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಹುದ್ದೆಗಳ ಪದನಾಮ	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ
1	ವಾರ್ಡನ್	10	08
2	ಮೇಲ್ವಿಚಾರಕರು	20	11
3	ಅಡುಗೆಯವರು	58	43
4	ಅಡುಗೆ ಸಹಾಯಕರು	31	26
5	ರಾತ್ರಿ ಕಾವಲುಗಾರರು	08	06
	ಒಟ್ಟು	**127**	**94**

ಇ) ಆದರಲ್ಲಿ ಸ್ವಂತ ಕಟ್ಟಡಗಳಿಲ್ಲದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿನಿಲಯಗಳ ಸಂಖ್ಯೆ ಎಷ್ಟು;

5 ಮೆಟ್ರಿಕ್–ಪೂರ್ವ ಮತ್ತು 4 ಮಟ್ರಿಕ್–ನಂತರದ ಹೀಗೆ ಒಟ್ಟು 9 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಪ್ರಸ್ತುತ ಕೆಳಕಂಡ 3 ವಿದ್ಯಾರ್ಥಿನಿಲಯಗಳ ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತದೆ.